## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS** 233/2003 **PW**-1

ದಿಃ27.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 9 ರವರ ಪರ ವಕೀಲರಾದ ಶ್ರೀ ಆರ ಎನ್ ಡಿ ವಕೀಲರಿಂದ**

ದಾವಾ ಆಸ್ತಿಗಳು ಗೋಕುಲ ರೋಡ ಏರೋಡರ್ಮಗೆ ಹತ್ತಿರದಲ್ಲಿವೆ ಎಂದರೆ ಸಾಕ್ಷಿ ಒಂದು ಆಸ್ತಿ ಹೊಂದಿಕೊಂಡಿದೆ ಮತ್ತೊಂದು ಆಸ್ತಿ ಸುಮಾರು 3 ಕಿಲೋ ಮೀಟರ ದೂರಿದಲ್ಲಿದೆ ಎನ್ನುತ್ತಾರೆ. ಸದರಿ ಆಸ್ತಿ 1 ರಿಂದ ಒಂದುವರೆ ಕಿಲೋ ಮೀಟರ ಒಳಗಡೆ ಇದೆ ಎಂದರೆ ಸಾಕ್ಷಿ ಅಜಮಾಸು ಇದೆ ಎನ್ನುತ್ತಾರೆ. ಪ್ರತಿವಾದಿಯರು ನಮ್ಮ ಜೊತೆ ವ್ಯವಹಾರ ಮಾಡಿದರು ಎಂದು ಹೇಳಿದ್ದು ಎಲ್ಲಿ ಆಯಿತು ಎಂದರೆ ಸಾಕ್ಷಿ ಪ್ರತಿವಾದಿಯ ಮನೆ ಉಣಕಲ್ ನಲ್ಲಿದ್ದು ಅಲ್ಲಿ ಆಗಿತ್ತು ಎಂದು ನುಡಿಯುತ್ತಾರೆ. ಪ್ರತಿವಾದಿ ನಂಬರ 9 ಪಾರ್ವತಿ ಇವರು ನಮ್ಮ ಜೊತೆ ವೈಯಕ್ತಿಕ ವ್ಯವಹಾರ ಮಾಡಿಲ್ಲವೆಂದರೆ ಸರಿ.

ನಿಶಾನೆ ಪಿ 19 ಮತ್ತು ನಿಶಾನೆ ಪಿ 20 ಇವುಗಳನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಪ್ರತಿವಾದಿ 9 ರವರ ಸಹಿಗಳು ಎಂದು ಹೇಳುವುದು ಅವರ ಸಹಿ ಅಲ್ಲ ಎಂದರೆ ಸಾಕ್ಷಿ ಅವರದೆ ಸಹಿ ಎನ್ನುತ್ತಾರೆ. ಪ್ರತಿವಾದಿ 9 ರವರು ಸದರಿ ಖರೀದಿ ವ್ಯವಹಾರ ಬರೆದುಕೊಟ್ಟಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರ ಕುಟುಂಬದಿಂದ ಎಲ್ಲರು ಒಟ್ಟಿಗೆ ಬರೆದುಕೊಟ್ಟಿರುತ್ತಾರೆಂದು ಹೇಳುತ್ತಾರೆ. ದಿಃ12-02-1993 ರಲ್ಲಿ ಸದರಿ ಪ್ರದೇಶದಲ್ಲಿ ದಾವಾದ ಆಸ್ತಿಯ ಕಿಮ್ಮತ್ತು ಎಷ್ಟು ಇತ್ತು ಎಂದು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಹಾಜರುಪಡಿಸಿಲ್ಲ ಆದರೆ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಅಷ್ಟೇಕ್ಕೆ ಖರೀದಿ ಮಾಡಿರುತ್ತೇವೆ ಎನ್ನುತ್ತಾರೆ. 1993-94 ರಲ್ಲಿ ದಾವಾ ಆಸ್ತಿಯ ಅಜುಬಾಜು ಇದಂತಹ ಆಸ್ತಿಗಳಿಗೆ ಎಕರೆಗೆ 2-3 ಲಕ್ಷ್ಯ ಇತ್ತು ಎಂದರೆ ಸಾಕ್ಷಿ ಅಷ್ಟು ಇತ್ತು ಎನ್ನುತ್ತಾರೆ.

ನಿಶಾನೆ ಪಿ 20 ಮತ್ತು 21 ಇವುಗಳನ್ನು ಸಾಕ್ಷಿಗೆ ತೋರಿಸಿ ಅವುಗಳ ರೀತಿಯ ಯಾವ ರೀತಿಯ ಕಬ್ಜಾ ಕೊಟ್ಟಿರುತ್ತಾರೆಂದರೆ ಸಾಕ್ಷಿ ಸೇಲ್ ಆಗ್ರಿಮೆಂಟ ಹಾಗೂ ಪಾವರ ಆಫ ಅರ್ಟನಿ ಕೊಟ್ಟು ದಾವಾ ಆಸ್ತಿಯ ಕಬ್ಜಾ ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಶಾನೆ ಪಿ 19 ರಲ್ಲಿ ಇರುವ ಸಹಿ ಪ್ರತಿವಾದಿ 9 ರವರದು ಅಲ್ಲ ಎಂದರೆ ಸಾಕ್ಷಿ ಕುಟುಂಬದವೆರೆಲ್ಲರು ಸೇರಿ ಸದರಿ ದಾಖಲೆಗೆ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಶಾನೆ ಪಿ 19 ಮತ್ತು ನಿಶಾನೆ 20 ರಲ್ಲಿರುವ ಪಾರ್ವತಿ ಎಂಬ 9 ನೇ ಸಹಿಯನ್ನು ನಿಶಾನೆ ಪಿ 19(ಎ) ಮತ್ತು ನಿಶಾನೆ ಪಿ 20(ಎ) ಎಂದು

ಗುರ್ತಿಸಲಾಯಿತು. ಎಲ್ಲರು ಕೂಡಿ ಒಪ್ಪಿ ಸದರಿ ದಾಖಲೆಗೆ ಸಹಿ ಮಾಡಿಕೊಟ್ಟಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ